ಉಪಯೋಗ ಮಾಡುತ್ತೀರಿ ಎಂದು ಗೊತ್ತಾಗಬೇಕು. ಒಂದು ಲೀಟರ್ ಪ್ಯುಯಲ್‌ಗೆ ಎಷ್ಟು ಯೂನಿಟ್ ಉತ್ಪಾದನೆಯಾಗುತ್ತದೆ? ಈ ಮೂರಕ್ಕೆ ನನಗೆ ಮಾಹಿತಿ ಕೊಡಿ.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಸದಸ್ಯರು ಕಾಸ್ಟ್ ಏನಿದೆ ಎಂದು ಕೇಳಿದ್ದಾರೆ. ಮತ್ತೆ ಎಲ್ಲೆಲ್ಲಿ ಸಪ್ಲೈ ಮಾಡುತ್ತೀರಿ, ಪ್ರತಿವರ್ಷ ಉತ್ಪಾದನೆ ಬಗ್ಗೆ ಕೇಳಿದ್ದಾರೆ. ಇದರ ಬ್ರೇಕ್‌ಅಪ್ ಮತ್ತು ಒಂದು ಲೀಟರ್ ಡೀಸಲ್‌ಗೆ ಎಷ್ಟು ಜನರೇಟ್ ಆಗುತ್ತದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ತರಿಸಿ ನಾಳೆಯೇ ಅವರಿಗೆ ನಾನು ಒದಗಿಸುತ್ತೇನೆ.

ಅರೆ ಖುಷ್ಕಿ ಪ್ರದೇಶಗಳು ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೆರೆ ಆಶ್ರಯದಲ್ಲಿ ವ್ಯವಸಾಯ ಮಾಡುತ್ತಿರುವುದು.

195(1465) ಶ್ರೀ ಎಸ್. ಜಯಣ್ಣ (ಕೊಳ್ಳೇಗಾಲ) :— ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವಾರು ಶತಮಾನಗಳಿಂದ ಕೆರೆ ಆಶ್ರಯದಲ್ಲಿನ ಜಮೀನುಗಳಲ್ಲಿ ತರೀಬೆಳೆ ತೆಗೆಯುತ್ತಿದ್ದೂ ಸರಿಯಷ್ಟೆ. ಕಬಿನಿ ನಾಲೆ ನಿರ್ಮಾಣದ ನಂತರ ಆ ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಿರುವುದು ನಿಜವೇ. ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

2. ಸದರಿ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲು ಅಲ್ಲಿನ ರೈತರು ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಕೈಕೊಂಡಿರುವ ಕ್ರಮಗಳೇನು?

3. ಯಾವಾಗ ಆ ಪ್ರದೇಶಗಳನ್ನು ಪೂರ್ಣ ನೀರಾವರಿ ಎಂದು ಘೋಷಿಸಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1. ಕಬಿನಿ ಯೋಜನೆಯಡಿಯಲ್ಲಿನ ಬರುವ ಯಳಂದೂರು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಅಚ್ಚುಕಟ್ಟು ವ್ಯಾಪ್ತಿಗೆ ವಿತರಣಾ ನಾಲೆ 41 ರಿಂದ 62 ರವರೆಗೆ ಒಳಪಟ್ಟಿರುತ್ತದೆ ಮತ್ತು ಹಲವಾರು ಸಣ್ಣ ಕೆರೆಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಹಾಗೂ ಹಲವಾರು ಶತಮಾನಗಳಿಂದ ಕೆರೆಗಳ ಆಶ್ರಯ ಪ್ರದೇಶಗಳಲ್ಲಿ ತರಿ ಬೆಳೆ ಬೆಳೆಯುವುದು ತಿಳಿದು ಬಂದಿರುತ್ತದೆ. ಇದಕ್ಕೆ ಖಾತ್ರಿಯಾದ ನೀರು ಸರಬರಾಜು ಇದ್ದಿಲ್ಲವಾದ್ದರಿಂದ ಕಬಿನಿ ಯೋಜನೆಯು ಅದ ಮೇಲೆ ಖಾತ್ರಿಯಾದ ನೀರು ಸರಬರಾಜನ್ನು ಅರೆ ನೀರಾವರಿ ಬೆಳೆಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಿದ್ದು ಅದರ ರೀತ್ಯಾ ಕಬಿನಿ ಯೋಜನೆಯಡಿಯಲ್ಲಿ ಬರುವ ಮೇಲ್ಕಂಡ ಅಚ್ಚುಕಟ್ಟು ಪ್ರದೇಶಗಳನ್ನು ಅರೆ ನೀರಾವರಿ ಎಂದು ಘೋಷಿಸಲಾಗಿದೆ.

Atchkat coming under Yalandur & Kollegal Taluka lies in the distributory from 41 to 62 of KRBC. Before advent of KRBC come wet atchkat were under tanks, which were not getting assured water supply. After advent of Kabini Project, these lands get assured water

supply for semidry crops. Hence as per the sanctioned Kabini Project report the lands coming under tank atchkat of Yalandur and Kollegal Taluks has been declared as semidry crops

2. ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ 41 ರಿಂದ 43 ರವರೆಗಿನ ಅಚ್ಚುಕಟ್ಟು ಪ್ರದೇಶದ ರೈತರು ಸದರಿ ಕಬಿನಿ ಯೋಜನೆಯಲ್ಲಿ ಅಚ್ಚುಕಟ್ಟು ಪ್ರದೇಶವನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಿಸಲು ಮನವಿ ಸಲ್ಲಿಸಲಾಯಿತು. ದಿ: 11-6-92 ರ ಪತ್ರದಲ್ಲಿ ಬೆಳೆ ಪದ್ಧತಿಯನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ. ಆದ್ದರಿಂದ ಖಾತ್ರಿಯಾದ ನೀರು ಸರಬರಾಜನ್ನು ಅರೆ ನೀರಾವರಿ ಬೆಳೆಗೆ ಸರಬರಾಜು ಮಾಡಲಾಗುತ್ತಿದೆ.

The Ryots of above lands have represented for changing the cropping pattern and the proposal was submitted. In the letter dt. 11-6-92 it is stated that the cropping pattern cannot be altered. Hence assured water supply for semidry crop is being supplied.

3. ಸದರಿ ವಿತರಣಾ ನಾಲೆಗಳ ಅಚ್ಚುಕಟ್ಟು ಪ್ರದೇಶವನ್ನು ಅರೆ ನೀರಾವರಿಗೆ ವಿನ್ಯಾಸಗೊಳಿಸಿರುವುದರಿಂದ ಸದರಿ ಪ್ರದೇಶಗಳನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

Since the project is designed for semidry crops from Distributory No.41 to 62, the question of changing the cropping pattern does not arise.

ಶ್ರೀ ಎನ್. ಜಯಣ್ಣ:— ಮಾನ್ಯ ಅಧ್ಯಕ್ಷರೇ, ಯಳಂದೂರು ತಾಲ್ಲೂಕು ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವಾರು ಶತಮಾನಗಳಿಂದ ಸುಮಾರು 26 ಕೆರೆಗಳ ಆಶ್ರಯದಲ್ಲಿ ಇದುವರೆಗೆ ತರಿ ಬೆಳೆ ತೆಗೆಯುತ್ತಿದ್ದ ಕಬಿನಿ ನಾಲೆ ನೀರಾವರಿ ಬಂದ ನಂತರ ಸದರಿ ಪ್ರದೇಶವನ್ನು ಅರೆನೀರಾವರಿಯಾಗಿ ಪರಿವರ್ತಿಸಲಾಗಿದೆ. ಇದು ಸಂಪೂರ್ಣವಾಗಿ ತಾಂತ್ರಿಕ ದೋಷದಿಂದ ಕೂಡಿದೆಯೇ ಹೊರತು ನೀರಿನ ಪ್ರಮಾಣವಾಗಲೀ, ಮಳೆ ಪ್ರಮಾಣವಾಗಲೀ ಕಡಿಮೆಯಾಗಿಲ್ಲ. ಮಳೆ ಆಶ್ರಯದಲ್ಲಿ ತರಿ ಜಮೀನಿನಲ್ಲಿ ಬೆಳೆಯತಕ್ಕಂಥ ಯಾವುದೇ ಬೆಳೆಯನ್ನು ಕೂಡ ನಾವು ಬದಲಾವಣೆ ಕೂಡ ಮಾಡಿಕೊಂಡಿಲ್ಲ. ಅದೇ ಬೆಳೆಯನ್ನು ನಾವು ತೆಗೆಯುತ್ತಿದ್ದೇವೆ. ಏನೋ ತಾಂತ್ರಿಕ ದೋಷದಿಂದ ಆಗಿರತಕ್ಕಂಥಾದ್ದನ್ನು ಸರಿಪಡಿಸಿಕೊಡಬೇಕು. ಎಂದು ಮಾನ್ಯ ನೀರಾವರಿ ಮಂತ್ರಿಗಳಲ್ಲಿ ನಾನು ಮನವಿಮಾಡಿ ಕೊಳ್ಳುತ್ತೇನೆ. 40 ರಿಂದ 60 ಏನು ತೂಬುಗಳಿವೆ, 40ರಿಂದ 60 ನೇ ತೂಬಿಗೆ ಬರತಕ್ಕಂಥ ಎಲ್ಲ ನೀರಾವರಿ ಪ್ರದೇಶ ಕೂಡ ಕೆರೆ ಆಶ್ರಯವನ್ನು ಹೊಂದಿರತಕ್ಕಂಥ ಪ್ರದೇಶ. ನಾವು ಯಾವುದೇ ಬೆಳೆ ಪದ್ಧತಿಯನ್ನು ಬದಲಾವಣೆ ಮಾಡಿಲ್ಲ. ಮತ್ತೆ ತಾವು ಎಷ್ಟು ಪ್ರಮಾಣದಲ್ಲಿ ನೀರು ಕೊಡುತ್ತಿದ್ದೀರಿ, ಅಷ್ಟೇ ಪ್ರಮಾಣದಲ್ಲಿ ನಾವು ಇದುವರೆಗೂ ಕೂಡ ತರಿ ಬೆಳೆಯನ್ನು ಮಾಡುತ್ತಿದ್ದೇವೆ. ನಮಗೆ ಹೆಚ್ಚಿನ ನೀರಿನ ಅಗತ್ಯ ಇಲ್ಲದಿದ್ದರೂ ಕೂಡ ಏನು ತಾಂತ್ರಿಕ ದೋಷದಿಂದ ಆಗಿರತಕ್ಕಂಥ, ಅರೆ ನೀರಾವರಿ ಎಂದು ತಾವು

ಏನು ಘೋಷಿಸಿದ್ದೀರಿ, ಅದನ್ನು ಬದಲಾವಣೆ ಮಾಡಿಕೊಡಬೇಕು. ಮತ್ತು ಕೆನಾಲ್ ಲೈನಿಂಗ್ ಮಾಡಿಕೊಡಬೇಕು. ಸಂಪೂರ್ಣವಾಗಿ ಪೂರ್ಣ ನೀರಾವರಿ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳಿ ಕೆನಾಲ್ ಲೈನಿಂಗ್‌ಗೋಸ್ಕರ ಆಸ್ಪದ ಮಾಡಿಕೊಟ್ಟು ಸಂಪೂರ್ಣ ನೀರಾವರಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಕೊಡತಕ್ಕಂಥ ನೀರಿನ ಪ್ರಮಾಣವೇ ನಮಗೆ ಸಾಕಾಗಿದೆ. ಮಳೆ ಆಶ್ರಯದಲ್ಲಿ ನಾವು ಸಂಪೂರ್ಣ ತರಿ ಬೆಳೆಯನ್ನು ಬೆಳೆಯುತ್ತಿದ್ದೇವೆ. ಆ ಮಳೆ ನೀರು ಕೂಡ ಇವತ್ತು ಸಾಕಷ್ಟು ಇರುವುದರಿಂದ ನಾವು ತರಿ ಬೆಳೆ ಬೆಳೆಯುವುದಕ್ಕೆ ಆಸ್ಪದ ಮಾಡಿಕೊಡಬೇಕು ಅಧ್ಯಕ್ಷರ ಮೂಲಕ ಮಾನ್ಯ ಭಾರಿ ನೀರಾವರಿ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎಸ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಣ್ಣನವರು ಕೇಳಿದಂತಹ ವಿಚಾರ ಏನು ಎಂದರೆ,-

(ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಉಪಸ್ಥಿತರಾದರು)

ಸೆಮಿಡ್ರೈ ಕ್ರಾಪ್ ಇದೆ, ಅದನ್ನು ನಾವು ಫುಲ್ ವೆಟ್ ಕ್ರಾಪ್ ರೀತಿ ಮಾಡಿಕೊಡಬೇಕು, ಡಿಫ್ಯೂಟಿ 41 ಯಿಂದ 62ವರೆಗೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಎರಡು ವಿಚಾರಗಳು ಇವೆ. ಜಯಣ್ಣ ಅವರಿಗೆ ಗೊತ್ತಿರುವಹಾಗೆ ಈ ನಾಲೆಯಲ್ಲಿ ಅನೇಕ ಕೆರೆಗಳು ಇವೆ. ಆ ಕಮಾಂಡ್ ಏರಿಯಾ ಕೂಡ ಇದೆ. ಆದರೆ ಈ ಯೋಜನೆಯ ಅಚ್ಚುಕಟ್ಟಿನಲ್ಲಿ ಕೆನಲ್ ಬಿಪಳ ಕಟ್ಟುಕೊಂಡಿಗಿದೆ. 25 ವರ್ಷಕ್ಕೆ ಒಂದು ಸಾರಿ ಕೆನಾಲ್ ರಿಪೇರಿ ಮಾಡದೇ ಹೋದರೆ ಸಿಸ್ಟಮ್ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ 30 ಪರ್ಸೆಂಟ್ ನೀರು ವೇಸ್ಟಾಗುತ್ತಿದೆ ಎನ್ನುವಂತಹ ನಮಗೆ ಬಂದಿರತಕ್ಕಂಥ ಮಾಹಿತಿ. ಆದ್ದರಿಂದ ನಾನು ಒಂದು ಯೋಚನೆ ಏನು ಮಾಡುತ್ತೇನೆ ಎಂದರೆ ಒಬ್ಬರು ಚೀಫ್ ಇಂಜಿನಿಯರ್‌ನ್ನು ಕಳಿಸಿ, ಇಬ್ಬರು- ಮೂವರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಹಾಕಿ ಕೆನಾಲ್ ರಿಪೇರಿ ಯಾವ ಪ್ರಮಾಣದಲ್ಲಿ ಆಗಬೇಕು, ನೀರಿನ ಲಭ್ಯತೆ ಎಷ್ಟು ಇದೆ, ಅದು ಎಷ್ಟು ಅಚ್ಚುಕಟ್ಟು ಆಗುತ್ತದೆ, ಈಗ ಇರತಕ್ಕಂಥ ಅಚ್ಚುಕಟ್ಟು ಏನು, ಕ್ರಾಪ್ ಪ್ಯಾಟರ್ನ್ ಯಾವುದು, ಅದಕ್ಕೆ ಸೆಮಿಡ್ರೈ ಎಷ್ಟು ಮಾಡಬಹುದು ಮತ್ತು ಫುಲ್ ವೆಟ್ ಮಾಡುವ ಬಗ್ಗೆ ತೀವ್ರ ಪರಿಶೀಲನೆಯನ್ನು ಮಾಡಲಾಗುವುದು.

ಅಧ್ಯಕ್ಷರು :— ಜಯಣ್ಣನವರೇ, ನೀವು ಬೇರೆ ಏನಾದರೂ ಕೇಳಬೇಕೇ?

ಶ್ರೀ ಎಸ್. ಜಯಣ್ಣ :— ಕೊಟ್ಟಂತಹ ಉತ್ತರ ಸಮಂಜಸವಾಗಿದೆ.

ಜಯನಗರ ಕ್ಷೇತ್ರದ ಲಕ್ಷಣಂದ್ರ ಕ್ವಾರಿ ಜಾಗದ ಬತ್ತುವರಿ.

198(1355) ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) :— ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಯನಗರ ವಿಧಾನಸಭಾ ಕ್ಷೇತ್ರದ ಲಕ್ಷಣಂದ್ರ ಕ್ವಾರಿ ಜಾಗವು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?